ಅ) ಬಸವ ಕಲ್ಯಾಣದ ಸಸ್ತಾಪುರದಲ್ಲಿ 110 ಕೆವಿ ಪವರ್ ಸ್ಟೇಷನ್ ಆ ಮಾಡಲು ಭೂಮಿಯನ್ನು ವಶಪಡಿಸಿಕೊಂಡಿದ್ದು, ಇದುವರೆಗೂ ಕ್ರ ತೆಗೆದುಕೊಳ್ಳದಿರುವುದು ನಿಜವೆ?

ಆ) ಸಸ್ತಾಪುರ ಗ್ರಾಮದಲ್ಲಿ ವಿದ್ಯುತ್ ಸರಬರಾಜು ಸರಿಯಾದ ರೀತಿಯಲ್ಲಿ ಆಗ ರೈತರ ಪಂಪುಸೆಟ್ಟುಗಳು ಹಾಳಾಗುತ್ತಿರುವುದರಿಂದ ಅಲ್ಲಿ ಪವರ್ ಸ್ಟೇಷ ಅನ್ನು ಪ್ರಾರಂಭಿಸಲು ಸರ್ಕಾರ ಶೀಘ್ರವಾಗಿ ಕ್ರಮ ತೆಗೆದುಕೊಳ್ಳುವುದೇ?

ಶ್ರೀ ಕೆ.ಎ. ನಿಸಾರ್ ಅಹಮದ್ (ಇಂಧನ ರಾಜ್ಯ ಸಚಿವರು);

ಅ) ಬಸವಕಲ್ಯಾಣದ ಸಸ್ತಾಪುರದಲ್ಲಿ ನಿರ್ಮಾಣ ಮಾಡಲು ಉದ್ದೇಶಿಸಿರುವ 1 ಕೆವಿ ಪವರ್ ಸ್ಟೇಷನ್‌ಗೆ ಬೇಕಾಗುವ ಭೂಮಿಯನ್ನು ಇದುವರೆವಿಗೆ ವಶಪಡಿಸಿಕೊಂಡೀ ಆದ್ದರಿಂದ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಿಲ್ಲ.

ಆ) ಭೂಮಿ ಸ್ವಾಧೀನದ ಕಾರ್ಯವು ಪ್ರಗತಿಯಲ್ಲಿದೆ ಭೂಮಿಯನ್ ಸ್ವಾಧೀನಪಡಿಸಿಕೊಂಡ ನಂತರ ನಿರ್ಮಾಣ ಕಾರ್ಯವನ್ನು ಆದಷ್ಟು ಜಾಗ್ರ ಪ್ರಾರಂಭಿಸಲಾಗುವುದು. ಅಲ್ಲದೇ ಸಸ್ತಾಪುರದ ಉದ್ದೇಶಿತ 110 ಕೆವಿ ವಿದ್ಯುತ್ ಉಪಕೇಂದ್ರಕ್ಕೆ ವಿದ್ಯುತ್ ಸರಬರಾಜು ಮಾಡಲು ಹುಮ್ನಾಬಾದ್ನಲ್ಲಿ 220:110 ಕೆ ವಿದ್ಯುತ್ ಸ್ವೀಕರಣಾ ಕೇಂದ್ರವನ್ನು ಚಾಲನೆಗೊಳಿಸುವುದು ಬಹಳ ಅಗತ್ಯವಾಗಿದ ಆದ್ದರಿಂದ ಮಂಡಳಿಯು ಹುಮ್ನಾಬಾದ್ನಲ್ಲಿ 220:110 ಕೆವಿ ವಿದ್ಯುತ್ ಸ್ವೀಕರಣ ಕೇಂದ್ರವನ್ನು ತ್ವರಿತಗತಿಯಲ್ಲಿ ಚಾಲನೆಗೊಳಿಸುವ ಬಗ್ಗೆ ತೀವ್ರ ರೀತಿಯಲ್ಲಿ ಕ್ರಮ ತೆಗೆದುಕೊಳ್ಳುತ್ತಿದೆ.

ಬಸವಕಲ್ಯಾಣದಲ್ಲಿ ಲೋಕೋಪಯೋಗಿ ಇಲಾಖೆಯ ಉಪ ವಿಭಾಗವನ ಪ್ರಾರಂಭಿಸುವ ಬಗ್ಗೆ

333 - ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್ (ಬಸವ ಕಲ್ಯಾಣ): ಮಾನ್ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಬೀದರ್ ಜಿಲ್ಲೆಯ ಬಸವಕಲ್ಯಾಣದಲ್ಲಿ ಮಂಜೂರಾಗಿರುವ ಲೋಕೋಪಯೋಗಿ ಉಪ ವಿಭಾಗವು ಯಾವಾಗ ಪ್ರಾರಂಭವಾಗುವುದು?

ಆ) ಬಸವ ಕಲ್ಯಾಣದಲ್ಲಿ ಉಪ ವಿಭಾಗಾಧಿಕಾರಿಗಳ ಕಛೇರಿ ಭೂ ಸೇನ ಉಪ ವಿಭಾಗ ಸಿವಿಲ್ ಕೋರ್ಟ್ಗಳಿದ್ದು, ಲೋಕೋಪಯೋಗಿ ಇಲಾಖೆಯ ಉಪ ವಿಭಾಗವು ಇಲ್ಲದೆ ಇಲಾಖೆಗೆ ಸಂಬಂಧಪಟ್ಟ ಕೆಲಸ ಕಾರ್ಯಗಳ ಸಾಗಲು ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಉಪ ವಿಭಾಗವನ್ನು ಈ ವರ್ಷದಲ್ಲಿ ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳಲಾಗುವುದೇ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು);

ಅ) ಬೀದರ್ ಜಿಲ್ಲೆಯ ಬಸವಕಲ್ಯಾಣದಲ್ಲಿ ಲೋಕೋಪಯೋಗಿ ಇಲಾಖೆಯ ಯಾವ ಉಪ ವಿಭಾಗವು ಮಂಜೂರಾಗಿರುವುದಿಲ್ಲ. ಕಾರಣ ಸದರಿ ಉಪ ವಿಭಾಗ ಕಛೇರಿಯನ್ನು ಪ್ರಾರಂಭಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) - ಇಲ್ಲ -

ಇ) - ಉದ್ಭವಿಸುವುದಿಲ್ಲ-

ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ವಿಶೇಷ ಅನುದಾನದ ಬಿಡುಗಡೆ

262 - ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ವಿಶೇಷ ಅನುದಾನವನ್ನು ಸರ್ಕಾರ ನಿಗಧಿ ಪಡಿಸಿದೆಯೇ;

ಆ) ಹಾಗಿದ್ದಲ್ಲಿ, ಈವರೆಗೆ ಎಷ್ಟು ಹಣ ಬಿಡುಗಡೆ ಮಾಡಿದೆ;

ಇ) ಬೆಂಗಳೂರು, ಮೈಸೂರು ರಸ್ತೆಯನ್ನು, ವಾಹನ ಸಂಚಾರದ ಒತ್ತಡಕ್ಕೆ ಅನುಗುಣವಾಗಿ ಹಾಗೂ ಅವಶ್ಯಕತೆಗೆ ತಕ್ಕಂತೆ, ಅಭಿವೃದ್ಧಿ ಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಹೌದು.

ಆ) ಪ್ರತಿ ವಿಧಾನಸಭಾ ಮತ ಕ್ಷೇತ್ರಕ್ಕೆ ಲೋಕೋಪಯೋಗಿ ಇಲಾಖೆ ರಸ್ತೆ ಮತ್ತು ಸೇತುವೆಗಳ ಅಭಿವೃದ್ಧಿಗಾಗಿ 10.00 ಲಕ್ಷ ರೂ.ಗಳ ಅನುದಾನ ನಿಗದಿಪಡಿಸಿದ್ದು. ದಿನವರಿ 94ರ ವರೆವಿಗೆ ಒಟ್ಟು 300 ಲಕ್ಷ ರೂ. ಹಣ ಬಿಡುಗಡೆ ಮಾಡಿದೆ.

ಇ) ಬೆಂಗಳೂರು-ಮೈಸೂರು ರಸ್ತೆಯಲ್ಲಿ ಹೆಚ್ಚಿರುವ ಸಂಚಾರದಟ್ಟಣೆಯನ್ನು ಅನುಸರಿಸಿ, ಈ ರಸ್ತೆಯಲ್ಲಿ ಅವಶ್ಯವಾಗಿರುವ ಭಾಗಗಳನ್ನು ಅಗಲಪಡಿಸುವುದು, ತಿರುವುಗಳನ್ನು ನೇರ ಪಡಿಸುವುದು, ಮಧ್ಯಂತರ ಮೀಡಿಯನ್ ನಿರ್ಮಿಸುವುದು, ಪ್ರತಿಫಲನ ಎಚ್ಚರಿಕೆ ಸೂಚನಾ ಫಲಕಗಳನ್ನು ಕ್ಯಾಟ್ ಐ ಗಳನ್ನು ಅಳವಡಿಸುವುದು, ಮರು ಡಾಂಬರೀಕರಣ ಮಾಡುವುದು ಮಂತಾದ ಕ್ರಮಸಗಳನ್ನು ತೆಗೆದುಕೊಳ್ಳಲಾಗಿದೆ. 1993-94ರ ಸಾಲಿನಲ್ಲಿ ಸುಮಾರು 150.00 ಲಕ್ಷ ರೂ.ಗಳ ಒಟ್ಟು ವೆಚ್ಚದಲ್ಲಿ ಈ ರಸ್ತೆಯನ್ನು ಅಭಿವೃದ್ಧಿಪಡಿಸಲಾಗುತ್ತಿದೆ.

ರಾಜ್ಯದಲ್ಲಿ ಹೊಸ ಜಲವಿದ್ಯುತ್ ಯೋಜನೆಗಳು

248 - ಶ್ರೀ ಸಾದತ್ ಅಲಿ ಖಾನ್ (ಚನ್ನಪಟ್ಟಣ) : ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಹೊಸ ಜಲವಿದ್ಯುತ್ ಯೋಜನೆಗಳನ್ನು ಸ್ಥಾಪಿಸುವ ಪ್ರಸ್ತಾವನೆ ಇದೆಯೇ?

ಆ) ರಾಜ್ಯದಲ್ಲಿನ ವಿದ್ಯುತ್ ಪ್ರಮಾಣ ಕೊರತೆ ಇಷ್ಟು?

ಇ) ಹೊಸ ವಿದ್ಯುತ್ ಯೋಜನೆಗಳನ್ನು ನಿರ್ಮಿಸಲು ಯೋಜಿಸಲಾಗಿರುವ ಯೋಜನೆಗಳ ಹೆಸರುಗಳು ಯಾವುವು?

ಈ) ಅಫನಾಶಿನಿ ಯೋಜನೆ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಎಸ್.ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು) ;

ಅ) ಇದೆ.

ಆ) ರಾಜ್ಯದಲ್ಲಿ 31-3-1993ರಲ್ಲಿ ವಿದ್ಯುತ್ ಪ್ರಮಾಣ ಕೊರತೆ ಈ ಕೆಳಗಿನಂತಿತ್ತು.

ರ್ನಾಟಕ ವಿದ್ಯುತ್ ಗಮ	ಗರಿಷ್ಟ ಬೇಡಿಕೆ ಮೆ.ವ್ಯಾಟ್ಗಳಲ್ಲಿ	ವಿದ್ಯುತ್ ಉತ್ಪಾದನೆ ದಶಲಕ್ಷ ಯೂನಿಟ್ ಗಳಲ್ಲಿ
ವಿದ್ಯುತ್ ಪ್ರಮಾಣದ ಬೇಡಿಕೆ	3300	20950
ವಿದ್ಯುತ್ ಪ್ರಮಾಣದ ಲಭ್ಯತೆ (ಕೇಂದ್ರ ಸರ್ಕಾರದ ಪ್ರಮಾಣ ಸೇರಿ)	2643	17163
ೊರತೆ	657	3787
ೇಖಡವಾರು ಕೊರತೆ	19.9	18.1